# ಕರ್ನಾಟಕ ಲೋಕಾಯುಕ್ತ

ನಂ. ಲೋಕ್/ಎಆರ್‌ಇ-16/ಡಿಇ/**279/2014**.

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 06/04/2021.

## ವಿಚಾರಣಾ ವರದಿ

**ಉಪಸ್ಥಿತರು: ಸೆಲ್ವಕುಮಾರ್**.ಸಿ, ಅಪರ ನಿಬಂಧಕರು ವಿಚಾರಣೆಗಳು-16, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಶ್ರೀ ಎ.ವೈ.ವಡ್ರಳ್ಳಿ, ಕಾರ್ಯದರ್ಶಿ, ಮುದಕವಿ ಗ್ರಾಮ ಪಂಚಾಯತಿ, ರಾಯಭಾಗ ತಾಲ್ಲೂಕು, ಬೆಳಗಾವಿ ಜಿಲ್ಲೆ ರವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:** 1.ಕಂಪ್ಲೆಂಟ್/ಉಪಲೋಕ್/ಬಿಜಿಎಂ-344/2007/ಎಆರ್‌ಇ-8 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರ ವರದಿ ದಿನಾಂಕ 15.02.2014.

2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 134 ಗ್ರಾಪಂಕಾ/2014 ಬೆಂಗಳೂರು, ದಿನಾಂಕ: 24/04/2014.
3. ಗೌರವಾನ್ವಿತ ಉಪಲೋಕಾಯುಕ್ತ-1 ರವರ ನಾಮನಿರ್ದೇಶನ ಸಂಖ್ಯೆ.ಲೋಕ್/ಐಎನ್‌ಕ್ಯೂ/14-ಎ/279/2014, ಬೆಂಗಳೂರು ದಿನಾಂಕ: 09/05/2014.
4. Note No.Uplok-1 & 2/DE/Transfers/ 2019, dated 07.02.2019.

* * * *

ಸರ್ಕಾರದ ಅಧೀನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ನಡವಳಿ ಸಂಖ್ಯೆ ಗ್ರಾಅಪ 134 ಗ್ರಾಪಂಕಾ/2014 ಬೆಂಗಳೂರು, ದಿನಾಂಕ: 24/04/2014 ರ ಪ್ರಕಾರ ಇಲಾಖಾ ವಿಚಾರಣೆಯನ್ನು ನಡೆಸುವಂತೆ ಲೋಕಾಯುಕ್ತ ಸಂಸ್ಥೆಗೆ ವಹಿಸಿದ್ದು, ಅದರನುಸಾರ ಗೌರವಾನ್ವಿತ ಉಪಲೋಕಾಯುಕ್ತ-1 ರವರ ನಾಮನಿರ್ದೇಶನ ಆದೇಶ ಸಂಖ್ಯೆ

ಲೋಕ್/ಐಎನ್‌ಕ್ಯೂ/14–ಎ/279/2014, ಬೆಂಗಳೂರು ದಿನಾಂಕ: 09/05/2014 ರಂತೆ ಆ.ಸ.ನೌ ಶ್ರೀ **ಎ.ವೈ. ವಡ್ರಳ್ಳಿ**, ಕಾರ್ಯದರ್ಶಿ, ಮುದಕವಿ ಗ್ರಾಮ ಪಂಚಾಯತಿ, ರಾಯಭಾಗ ತಾಲ್ಲೂಕು, ಬೆಳಗಾವಿ ಜಿಲ್ಲೆ ( **ಇನ್ನು ಮುಂದೆ ಆಪಾದಿತ ಸರ್ಕಾರಿ ನೌಕರ ಎಂದು ಸಂಬೋಧಿಸಲ್ಪಡುವರು** ) ರವರ ವಿರುದ್ಧ ದೋಷಾರೋಪಣೆ ಸಿದ್ದಪಡಿಸಿ ಜಾರಿಗೊಳಿಸಿ ಇಲಾಖಾ ವಿಚಾರಣೆ ನಡೆಸಿ ವಿಚಾರಣಾ ವರದಿ ಸಲ್ಲಿಸಲು ಅಪರ ನಿಬಂಧಕರು, ವಿಚಾರಣೆಗಳು–11, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಿದ್ದು, ಅದರಂತೆ, ಅಪರ ನಿಬಂಧಕರು, ವಿಚಾರಣೆಗಳು–11, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರನ್ನು ವಿಚಾರಣಾಧಿಕಾರಿಯಾಗಿ ನೇಮಕ ಮಾಡಿದ್ದು, ಸದರಿಯವರು ಆಪಾದಿತ ಸರ್ಕಾರಿ ನೌಕರ ರವರ ವಿರುದ್ಧ **ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಿರುತ್ತಾರೆ:–**

ANNEXURE-I

CHARGE

That you DGO Sri. **A.Y. Vadralli, Secretary,** Mudakavi Grama Panchayath, Raya Bhaga Taluk, Bedlgaum District, while discharging your duties:-

(1) As shown in detail in I.O's report you DGO, 2005-06, 40 beneficiaries had been identified under Ashraya Scheme. But, out of them only 2 beneficiaries were not having houses. Whereas, family members of other 38 beneficiaries had houses already, to whom houses had been allotted.

(2) You DGO, during 2006-07, 60 beneficiareis have been identified under Ashraya Scheme, but out of them only 5 beneficiaries had no

houses. Whereas, family members of others beneficiaries had houses already, to whom houses had been allotted.

(3) You DGO payment has been made to beneficiaries (a) Smt. Laxmavva Mallappa maadar (b) Smt. Manjula Basappa maadar and (c) Smt. Sankravva Kallappa Talawar, though they had not constructed the houses.

(4) You DGO, has not made any entry in the panchayath property register for the houses constructed under Ashraya Scheme.

and thereby you DGO failed to maintain absolute integrity and devotion to duty and committed an act which is unbecoming of a Government Servant and thus you are guilty of misconduct under rule 3(i) to (iii) of KCS (Conduct) Rules 1966.

ANNEXURE-II

STATEMENT OF IMPUTATION OF MISCONDUCT

On the basis of complaint filed by Sri. Nagappa Bailappa Maadar R/o Mudakavi in in Ramdurga Taluk of Belgaum District (hereinafter referred to as 'Complainant') against 1) Sri. K.B. Daregowdra-Owner of Fair Price Shop of Mudakavi,2)Sri.Dalavai-Food Inspector at Mudakavi and 3) Sri. Bolishetty-FDA at Taluk Office in Ramdurga of Belgaum District alleging that they are selling in black market ration and kerosene supplied to Fair Price Shop at Mudakavi in Ramdurga Taluk, without distributing the same to the card holders, suo motu investigation was taken up under Section 7(2) of the Karnataka Lokayukta Act, 1984.

2. Then, their comments were called for. For that, they submitted comments denying the allegations. After receiving the comments,

rejoinder was called for from the complainant. For that, complainant has submitted reply alleging that the President, Vice President and Secretary of Mudakavi Gram Panchayath have made payment under Housing Scheme to beneficiaries, who have not constructed houses. After receiving rejoinder, the president, Vice President and Secretary of Mudakavi Grama Panchayath have been impleaded as DGOs.

3. Then, Police Inspector of Karnataka Lokayukta at belgaum was entrusted to investigate the complaint and report. On that, Investigation has been conducted by Sri. Raghavendra B. Havaladar, Police Inspector, Karnataka Lokayukta, Belgaum (hereinafter referred as Investigation Officer i.e. I.O. for short) and submitted report.

4. The report of the I.O. is that, records show that DGO i.e. Sri. A.Y. Vadralli, Secretary, Mudakavi Gram Panchayath, Raya Bhaga Taluk, Belgaum District, during 2005-06 and 2006-07, houses were allotted under Ashraya Scheme to beneficiaries who had houses and, made payment to beneficiaries who have not constructed houses.

5. After receiving the report from I.O. Sri. J.B. Kadannavar, president and Sri. A.Y. Vadrallai-Secretary were impleade and the comments of the DGOs were called for on the complaint and report of I.O. For that, Sri. J.B. Kadannavar-President has not submitted reply and Sri. A.Y. Vadrallai-Secretary has submitted his reply denying the allegations.

6. However, on consideration of the material, same have not been found convincing to accept or drop the proceedings against Sri. A.Y. Vadrallai-Secretary. Sri. J.B. Kadannavar-President has not filed any reply, it has been taken that he has nothing to say about his misconduct noticed and separate report will be made.

7. **Consideration of the material on record shows that:**

(a) As shown in detail in I.O's report, during 2005-06, 40 beneficiaries had been identified under Ashraya Scheme. But, out of them, only 2 beneficiaries were not having houses. Whereas, family members of other 38 beneficiaries had houses already, to whom houses had been allotted.

(b) During 2006-07, 60 beneficiaries have been identified under Ashraya Scheme, but out of them, only 5 beneficiaires had no houses, Whereas, family members of others beneficiaries had houses already, to whom houses had been allotted.

(c) DGO payment has been made to beneficiaries 1) Smt. Laxmavva Mallappa Maadar b) Smt. Manjula Basappa Maadar and c) Smt. Sankravva Kallappa Talawar, though they had not constructed houses:

(d) DGO has not made any entry in the panchayath property register for the houses constructed under Ashraya Scheme.

8. A careful consideration of the material, including report of I.O. and facts besides record available, prima facie shows that the DGO has failed to maintain absolute integrity besides devotion to duty and acted in a manner unbecoming of a public/government servant and thereby committed misconduct U/s 3(1) of KCS (Conduct) Rules and made himself liable for disciplinary action.

9. Since, the facts and material on record prima-facie show that the DGO has committed misconduct, recommendation U/s 12(3) of Karnataka Lokayukta Act, was made to the Competent Authority to initiate disciplinary proceedings against DGO and to entrust the enquiry to this institution under Rule14-A of Karnataka Civil Service (Classifications, Control and Appeal) Rules, 1957.

10. The Government after considering the recommendation made in the report, entrusted the matter to the Hon'ble Upalokayukta to conduct departmental/disciplinary proceedings against the DGO and to submit report. Accordingly, Hon'ble Upalokayukta-1 nominated ARE-11 to conduct enquiry and submit report. **Hence, the above charge.**

2. ನಾಮ ನಿರ್ದೇಶನದ ಆದೇಶದಂತೆ, ಆ.ಸ.ನೌರವರ ವಿರುದ್ಧ ದೋಷಾರೋಪಣೆ (Article of charges)ಅನ್ನು ಅಪರ ನಿಬಂಧಕರು, ವಿಚಾರಣೆಗಳು-11 ರವರು ರಚಿಸಿದ್ದು, ಸದರಿ ದೋಷಾರೋಪಣೆ ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯ ಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌ.ರವರಿಗೆ ದಿನಾಂಕ: 11/06/2014 ರಂದು ಕಳುಹಿಸಲಾಗಿರುತ್ತದೆ.

3. ಈ ಮೇಲ್ಕಂಡ ದೋಷಾರೋಪಣೆ (Article of charge)ಅನ್ನು ಆ.ಸ.ನೌರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ, ಆ.ಸ.ನೌ.ರವರು ದಿನಾಂಕ: 28/06/2014 ರಂದು ಹಾಜರಾಗಿದ್ದು, ಅವರ ಪ್ರಥಮ ಮೌಖಿಕ ಹೇಳಿಕೆ (First Oral Statement) ನಿಯಮ 11(9) ಕೆಸಿಎಸ್ (ಸಿಸಿಎ) ರೂಲ್ಸ್ 1957ರಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌರವರು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಬಯಸಿರುತ್ತಾರೆ.

4. ಆ.ಸ.ನೌ.ರವರಿಗೆ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

5. ಆ.ಸ.ನೌರವರು ಪ್ರತಿ ರಕ್ಷಣಾ ಹೇಳಿಕೆ ಸಲ್ಲಿಸಿ, ತಮ್ಮ ವಿರುದ್ಧದ ಆರೋಪಗಳನ್ನು ಸಂಪೂರ್ಣವಾಗಿ ನಿರಾಕರಿಸಿ, ತಾನು ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯನಿಷ್ಠೆಯನ್ನು ತೋರಿಸಿದ್ದು, ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವೆಗೆ ತರವಲ್ಲದ ರೀತಿಯಲ್ಲಿ

ನಡೆದುಕೊಂಡಿರುವುದಿಲ್ಲ ಮತ್ತು ನಿಯಮಗಳನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದಿಲ್ಲ. ಆದ್ದರಿಂದ, ತನ್ನನ್ನು ಸದರಿ ಆರೋಪಗಳಿಂದ ಕೈಬಿಡುವಂತೆ ವಿನಂತಿಸಿರುತ್ತಾರೆ.

6. ಈ ವಿಚಾರಣೆಯಲ್ಲಿ, ಆ.ಸ.ನೌಕರರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು, ದೂರುದಾರರಾದ ಶ್ರೀ **ನಾಗಪ್ಪ ಬೈಲಪ್ಪ ಮಾದಾರ್,** ಮುದಕವಿ, ಬೆಳಗಾವಿ ಜಿಲ್ಲೆ ರವರನ್ನು ಪಿಡಬ್ಲ್ಯೂ–1 ಎಂದು ಸಾಕ್ಷಿ ನುಡಿಸಿಕೊಂಡು **ನಿ.ಪಿ–1** ರಿಂದ **3** ರವರಿಗಿನ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ ಹಾಗೂ ತನಿಖಾಧಿಕಾರಿ ಶ್ರೀ **ರಾಘವೇಂದ್ರ ಬಸವಂತಪ್ಪ ಹವಾಲ್ದಾರ್,** ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೆಳಗಾವಿ ರವರನ್ನು ಪಿ.ಡಬ್ಲ್ಯೂ–2 ಎಂದು ಸಾಕ್ಷಿ ನುಡಿಸಿಕೊಂಡು, **ನಿ.ಪಿ–4** ರಿಂದ **ನಿ.ಪಿ–58** ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿದ್ದು, ಮಂಡನಾಧಿಕಾರಿಗಳು ವಿಚಾರಣಾ ಪ್ರಾಧಿಕಾರದ ಪರವಾಗಿ ಮೌಖಿಕ ಮತ್ತು ದಸ್ತಾವೇಜುಗಳನ್ನು ಗುರುತಿಸಿಕೊಂಡಿರುತ್ತಾರೆ.

7. ಆ.ಸ.ನೌ ರವರು ಪಿ.ಡಬ್ಲ್ಯೂ–2 ರವರ ಪಾಟೀ ಸವಾಲು ವಿಚಾರಣೆಗಾಗಿ ಕಾಯ್ದಿರಿಸಿದ ಸಂದರ್ಭದಲ್ಲಿ ಗೈರುಹಾಜರಾದ ಕಾರಣ, ಆ ಹಂತದಲ್ಲಿ ಈ ಆ.ಸ.ನೌ ರವರನ್ನು **ಏಕತರ್ಪಿ** ಎಂದು ನಿರ್ಣಯಿಸಲಾಗಿರುತ್ತದೆ.

8. ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌರವರ ಮೇಲೆ ಆಪಾದಿಸಲಾದ ಆರೋಪವನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

9. ಶಿಸ್ತುಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳ ವಾದವನ್ನು ಆಲಿಸಲಾಯಿತು ಮತ್ತು ಕಡತವನ್ನು ಪರಿಶೀಲಿಸಲಾಯಿತು, ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

10. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ:

**ಅಂಶ–1)** ಸಕಾರಾತ್ಮಕವಾಗಿ.

**ಅಂಶ–2)** ಅಂತಿಮ ಆದೇಶದಂತೆ.

## ಕಾರಣಗಳು

11. **ಅಂಶ–1:** ಈ ಪ್ರಕರಣದಲ್ಲಿ, ಆ.ಸ.ನೌ.ರವರ ವಿರುದ್ಧ ಆರೋಪಿಸಲಾದ ಆರೋಪವನ್ನು ರುಜುವಾತುಪಡಿಸಲು, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ಪ್ರಕರಣದ ದೂರುದಾರರಾದ ಶ್ರೀ **ನಾಗಪ್ಪ ಬೈಲಪ್ಪ ಮಾದಾರ್,** ಮುದಕವಿ, ಬೆಳಗಾವಿ ಜಿಲ್ಲೆ ರವರನ್ನು ಪಿಡಬ್ಲ್ಯೂ–1 ಎಂದು ಸಾಕ್ಷಿ ನುಡಿಸಿಕೊಂಡು **ನಿ.ಪಿ–1** ರಿಂದ **3** ರವರಿಗಿನ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ ಹಾಗೂ ತನಿಖಾಧಿಕಾರಿ ಶ್ರೀ **ರಾಘವೇಂದ್ರ ಬಸವಂತಪ್ಪ ಹವಾಲ್ದಾರ್,** ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೆಳಗಾವಿ ರವರನ್ನು ಪಿ.ಡಬ್ಲ್ಯೂ–2 ಎಂದು ಸಾಕ್ಷಿ ನುಡಿಸಿಕೊಂಡು, **ನಿ.ಪಿ–4** ರಿಂದ **ನಿ.ಪಿ–58** ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ.

12. **ಪಿಡಬ್ಲ್ಯೂ–1 ದೂರದಾರರಾದ** ಶ್ರೀ **ನಾಗಪ್ಪ ಬೈಲಪ್ಪ ಮಾದಾರ್,** ಬೆಳಗಾವಿ ರವರ ಮುಖ್ಯ ವಿಚಾರಣೆಯಲ್ಲಿ, ದೂರುದಾರರು ಮುದಕವಿ ಗ್ರಾಮದಲ್ಲಿ ವಾಸವಿರುವುದಾಗಿ, ಸದರಿ ಗ್ರಾಮವು ಮುದಕವಿ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುತ್ತದೆಂದು, ತನ್ನ ಗ್ರಾಮದಲ್ಲಿ ನ್ಯಾಯಬೆಲೆ ಅಂಗಡಿಯನ್ನು ಕೆ.ಬಿ. ದರೇಗೌಡ್ರ ಎಂಬುವರು ನಡೆಸಿಕೊಂಡು ಬರುತ್ತಿದ್ದು, ಆಹಾರ ಧಾನ್ಯಗಳನ್ನು ಪಡಿತರ ರೀತಿಯಲ್ಲಿ ಕೆ.ಬಿ. ದರೇಗೌಡ್ರ ರವರು ವಿತರಣೆ

ಮಾಡುತ್ತಿದ್ದರೆಂದು, ನಿಗದಿತ ಬೆಲೆಗಿಂತ ಹೆಚ್ಚಿನ ಬೆಲೆಗೆ ಕೆ.ಬಿ. ದರೇಗೌಡ್ರ ರವರು ಪಡಿತರ ವಿತರಣೆ ಮಾಡುತ್ತಿದ್ದುದ್ದಾಗಿ ಮತ್ತು ನಕಲಿ ಪಡಿತರ ಚೀಟಿಗಳನ್ನು ಇಟ್ಟುಕೊಂಡಿದ್ದರೆಂದು, ನಕಲಿ ಚೀಟಿಗಳನ್ನು ಬಳಸಿ ತರಿಸಿಕೊಂಡ ಆಹಾರಧಾನ್ಯಗಳನ್ನು ಕೆ.ಬಿ. ದರೇಗೌಡ್ರ ರವರು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದರೆಂದು ಮತ್ತು ಆ ಅವ್ಯವಹಾರದಲ್ಲಿ ಆಹಾರ ನಿರೀಕ್ಷಕರಾದ ದಳವಾಯಿ, ತಹಶೀಲ್ದಾರ್ ರವರ ಕಛೇರಿಯಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಬೋಳಶೆಟ್ಟಿ ರವರು ಶಾಮೀಲಾಗಿದ್ದರೆಂದು ಸಾಕ್ಷ್ಯ ನುಡಿದಿರುತ್ತಾರೆ.

13. **ಪಿಡಬ್ಲ್ಯೂ-1 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ,** ಶ್ರೀ ಮೆಹಬೂಬ್ ಸಾಬ್ ಎಂಬುವರು ಮೇಲ್ಕಂಡ ನ್ಯಾಯ ಬೆಲೆ ಅಂಗಡಿಯಲ್ಲಿ ಸೀಮೆಎಣ್ಣೆ ವಿತರಣೆ ಮಾಡುತ್ತಿದ್ದರೆಂದು, ಸದರಿ ಮೆಹಬೂಬ್ ಸಾಬ್ ಈಗ ಬದುಕಿಲ್ಲವೆಂದು, ಅವರು ಮರಣ ಹೊಂದಿದ ನಂತರ ಕೆ.ಬಿ. ದರೇಗೌಡ್ರ, ದಳವಾಯಿ ಮತ್ತು ಬೋಳಶೆಟ್ಟಿರುವರು ಸೇರಿ ಐದು ಲೀಟರ್ ಸೀಮೆಎಣ್ಣೆ ಬದಲಾಗಿ, ಮೂರು ಲೀಟರ್ ಸೀಮೆ ಎಣ್ಣೆ ವಿತರಿಸಿ ಮಿಕ್ಕ ಸೀಮೆಎಣ್ಣೆಯನ್ನು ಕಾಳಸಂತೆಯಲ್ಲಿ ಮಾರುತ್ತಿದ್ದರೆಂದು, ಆಹಾರ ಮತ್ತು ನಾಗರಿಕ ಪೂರೈಕೆ ಉಪನಿರ್ದೇಶಕರಿಗೆ ಫಿರ್ಯಾದನ್ನು ಕೊಟ್ಟಿದ್ದಾಗಿ, ಸದರಿ ಪಿರ್ಯಾದು **ನಿ.ಪಿ-1** ಎಂದು, ಆ ಬಗ್ಗೆ ತಾನು ಕೊಟ್ಟ ನಂತರ ಏನು ಕ್ರಮಕೈಗೊಳ್ಳಲಾಗಿಲ್ಲವೆಂದು, ಆ ಕಾರಣಕ್ಕಾಗಿ ದೂರುದಾರರು ಮಾನ್ಯ ಲೋಕಾಯುಕ್ತ ರವರಿಗೆ ಲಿಖಿತ ಫಿರ್ಯಾದನ್ನು ಕೊಟ್ಟಿದ್ದು, ಅದು **ನಿ.ಪಿ-2** ಎಂದು, ನಂತರ ದೂರುದಾರರ ತಮ್ಮ ಪ್ರತ್ಯುತ್ತರ ಕೊಟ್ಟಿದ್ದು ಅದು **ನಿ.ಪಿ-3** ಎಂದು ಗುರುತಿಸಲಾಗಿರುತ್ತದೆ.

14. **ಪಿಡಬ್ಲ್ಯೂ-2 ತನಿಖಾಧಿಕಾರಿ** ಶ್ರೀ ರಾಘವೇಂದ್ರ ಬಸವಂತಪ್ಪ ಹವಾಲ್ದಾರ್, ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೆಳಗಾವಿ ರವರ ಮುಖ್ಯ ವಿಚಾರಣೆಯಲ್ಲಿ, ತಾನು ದಿನಾಂಕ 30.08.2011 ರಿಂದ 26/05/2015 ರವರೆಗೆ ಬೆಳಗಾವಿ ಲೋಕಾಯುಕ್ತ ಕಛೇರಿಯಲ್ಲಿ ಪೊಲೀಸ್ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದು, ಕಂಪ್ಲೆಂಟ್/ಉಪಲೋಕ್/ಬಿಜಿಎಂ/344/2007/ಎಆರ್‌ಇ-8 ಕಡತದಲ್ಲಿ ಫಿರ್ಯಾದಿಯು ಹೊರಿಸಿರುವ ಆಪಾದನೆಗಳ ಸಂಬಂಧವಾಗಿ ತನಿಖೆ ನಡೆಸಲು ಮಾನ್ಯ

ಉಪಲೋಕಾಯುಕ್ತ-1 ರವರಿಂದ ಆದೇಶವಾಗಿದ್ದು, ಅದರಂತೆ, ಆರಕ್ಷಕ ಅಧೀಕ್ಷಕರವರ ಲಿಖಿತ ಆದೇಶದಂತೆ ತಾನು ತನಿಖಾಧಿಕಾರಿಯಾಗಿ ಈ ಪ್ರಕರಣದ ತನಿಖೆಯನ್ನು ಕೈಗೊಂಡಿದ್ದಾಗಿ ನುಡಿದಿರುತ್ತಾರೆ.

15. ಪಿಡಬ್ಲ್ಯೂ-2 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ತಾನು ದಿನಾಂಕ: 08/04/2013 ರಂದು ರಾಮದುರ್ಗದ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಯವರಿಂದ ಈ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಪಡೆದುಕೊಂಡಿದ್ದು, ಆ ಬಗ್ಗೆ ರಾಮದುರ್ಗದ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಯವರು ದಿನಾಂಕ: 08/04/2013 ರಂದು ತನಗೆ ಸಲ್ಲಿಸಿರುವ ಮೂರು ಹಾಳೆಗಳನ್ನೊಳಗೊಂಡ ಒಂದು ಅಸಲು ಪತ್ರವನ್ನು **ನಿಶಾನೆ ಪಿ-4** ಎಂದು ಗುರುತಿಸಿರುತ್ತಾರೆ. ತನಿಖಾಧಿಕಾರಿಯು ತನಿಖೆಯನ್ನು ಕೈಗೊಂಡು ತನಿಖಾ ವರದಿಯನ್ನು ಸಲ್ಲಿಸಿದ್ದು, 5 ಹಾಳೆಗಳನ್ನೊಳಗೊಂಡ ಅಸಲು ವರದಿಯು **ನಿಪಿ-5** ಮತ್ತು ನಿಪಿ-5ರ ಕೊನೆಯ ಹಾಳೆಯಲ್ಲಿರುವ ತನಿಖಾಧಿಕಾರಿಯ ಸಹಿ **ನಿಪಿ-5(ಎ)** ಎಂದು ಗುರುತಿಸಿರುತ್ತಾರೆ.

16. ಪಿಡಬ್ಲ್ಯೂ-2 ರವರ ಮುಂದುವರೆದ ವಿಚಾರಣೆಯಲ್ಲಿ, ರಾಮದುರ್ಗ ತಾಲ್ಲೂಕಿನ ಮುದಕವಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಮುದಕವಿ ಎಂ. ಕಲ್ಲಾಪುರ, ಎಂ.ಖಾನಪುರ ಮತ್ತು ಎಂ. ತಿಮ್ಮಾಪುರ ಎಂಬ ಗ್ರಾಮಗಳಲ್ಲಿ ರಾಜೀವ ಗಾಂಧಿ ಗ್ರಾಮೀಣ ವಸತಿ ನಿಗಮದ ವತಿಯಿಂದ, ಆಶ್ರಯ ಯೋಜನೆಯಡಿಯಲ್ಲಿ 2005-06ರಲ್ಲಿ 40 ಫಲಾನುಭವಿಗಳನ್ನು ಹಾಗೂ 2006-07 ರಡಿಯಲ್ಲಿ ಒಟ್ಟು 60 ಫಲಾನುಭವಿಗಳನ್ನು ಗ್ರಾಮಸಭೆಯ ಠರಾವಿನ ಮೂಲಕ ಆಯ್ಕೆ ಮಾಡಿದ್ದು ಕಂಡು ಬಂದಿದ್ದಾಗಿ, ಆ ಬಗ್ಗೆ ತಾನು ನಿಪಿ-5 ರಲ್ಲಿ ನಮೂದು ಮಾಡಿರುವುದಾಗಿ, ಆ ಸಂಬಂಧ ಇರುವ ಒಟ್ಟು 6 ಹಾಳೆಗಳನ್ನೊಳಗೊಂಡ ಫಲಾನುಭವವಿಗಳ ವಿವರಗಳನ್ನೊಳಗೊಂಡ 6 ದೃಢೀಕೃತ ಹಾಳೆಗಳನ್ನು ಒಟ್ಟಾಗಿ **ನಿಪಿ-6** ಎಂದು ಗುರುತಿಸಿರುತ್ತಾರೆ. 2005-6ನೇಯ ಸಾಲಿನಲ್ಲಿ ಆಯ್ಕೆಯಾದ 40 ಫಲಾನುಭವಿಗಳಿಗೆ ಆಶ್ರಯ ಯೋಜನೆಯಡಿಯಲ್ಲಿ ಮನೆ ನಿರ್ಮಿಸಲು ಪ್ರತಿಯೊಬ್ಬ ಫಲಾನುಭವಿಗೆ ತಲಾ ರೂ. 25,000/- ಗಳನ್ನು ತಲಾ ರೂ. 5,000/- ಗಳ ಚೆಕ್ ಮುಖಾಂತರ ಒಟ್ಟು 5 ಚೆಕ್‌ಗಳ ಮೂಲಕ ಪಾವತಿ ಮಾಡಿರುವುದಾಗಿ, ಆ

ಸಂಬಂಧವಾಗಿರುವ ರಿಜಿಸ್ಟರದ 10 ಹಾಳೆಗಳ ದೃಢೀಕೃತ ಪ್ರತಿಗಳನ್ನು ಒಟ್ಟಾಗಿ **ನಿಪಿ–7** ಎಂದು, ನಿಪಿ–7ಕ್ಕೆ ಸಂಬಂಧಪಟ್ಟಂತಿರುವ ಮಾಹಿತಿಯನ್ನೊಳಗೊಂಡ ಒಟ್ಟು 14 ಹಾಳೆಗಳ ಧೃಢೀಕೃತ ಪ್ರತಿಗಳನ್ನು ಒಟ್ಟಾಗಿ **ನಿಪಿ–8** ಎಂದು ಗುರುತಿಸಿಕೊಂಡಿರುತ್ತಾರೆ.

17. ತನಿಖಾಧಿಕಾರಿ/ಪಿಡಬ್ಲ್ಯೂ–2 ರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, 2006–07 ನೇಯ ಸಾಲಿನಲ್ಲಿ ಆಯ್ಕೆಯಾದ ಒಟ್ಟು 60 ಫಲಾನುಭವಿಗಳಿಗೆ ಆಶ್ರಯ ಯೋಜನೆಯಡಿಯಲ್ಲಿ ಮನೆ ನಿರ್ಮಿಸಲು ಪ್ರತಿಯೊಬ್ಬರಿಗೆ ತಲಾ ರೂ. 30,000/– ಗಳನ್ನು ಚೆಕ್‌ಗಳ ಮೂಲಕ ಹಂತ ಹಂತವಾಗಿ ನೀಡಿದ್ದು ಕಂಡು ಬಂದಿರುವುದಾಗಿ, ಆ ಬಗ್ಗೆ ಇರುವ ರಿಜಿಸ್ಟರ್‌ನ 15 ಹಾಳೆಗಳ ದೃಢೀಕೃತ ಪ್ರತಿಗಳನ್ನು ಒಟ್ಟಾಗಿ **ನಿಪಿ–9** ಎಂದು ಗುರುತಿಸಿಕೊಂಡಿರುತ್ತಾರೆ. 2005–6ನೇಯ ಸಾಲಿನಲ್ಲಿ ಆಯ್ಕೆಯಾದ 40 ಫಲಾನುಭವಿಗಳ ಪೈಕಿ 2 ಫಲಾನುಭವಿಗಳು ಮಾತ್ರ ಮನೆ ಇಲ್ಲದಿದ್ದ ಫಲಾನುಭವಿಗಳಾಗಿದ್ದರೆಂದು, **ಆದರೆ ಮಿಕ್ಕುಳಿದ 38 ಫಲಾನುಭವಿಗಳು ಅವರ ಕುಟುಂಬ ಸದಸ್ಯರ ಹೆಸರಿನಲ್ಲಿ ಮನೆಗಳನ್ನು ಹೊಂದಿದ್ದು ಕಂಡು ಬಂದಿರುತ್ತದೆಂದು, ಹಾಗೂ ಅಂತಹ ಕುಟುಂಬದ ಮೊತ್ತೊಬ್ಬರಿಗೆ ಮನೆ ಮಂಜೂರು ಮಾಡಿದ್ದು, ಅಂತವರು ಮೊದಲಿದ್ದ ಹಳೆಯ ಮನೆಗೆ ಹೊಂದಿಕೊಂಡು ಹೊಸ ಮನೆಯನ್ನು ನಿರ್ಮಿಸಿದ್ದು ತನಿಖೆಯಲ್ಲಿ ಹೊರ ಹೊಮ್ಮಿರುವುದಾಗಿ, ಆ ಸಂಬಂಧವಾಗಿ ತಾನು ಛಾಯಾಚಿತ್ರಗಳನ್ನ ತೆಗೆದಿದ್ದು ಅವುಗಳು ನಿಪಿ–10 ರಿಂದ ನಿಪಿ–29** ಇರುವುದಾಗಿ ಗುರುತಿಸಿರುತ್ತಾರೆ.

18. ಪಿಡಬ್ಲ್ಯೂ–2 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, 2006–7ನೇಯ ಸಾಲಿನಲ್ಲಿ ಆಯ್ಕೆಯಾದ ಒಟ್ಟು 60 ಫಲಾನುಭವಿಗಳ ಪೈಕಿ ಒಟ್ಟು 5 ಫಲಾನುಭವಿಗಳು ಮಾತ್ರ ಮನೆ ಇಲ್ಲದಿರುವುದು ಕಂಡು ಬಂದಿರುವುದಾಗಿ ಮತ್ತು **ಮಿಕ್ಕುಳಿದ 55 ಫಲಾನುಭವಿಗಳಿಗೆ ಅವರ ಕುಟುಂಬ ಸದಸ್ಯರ ಹೆಸರುಗಳಲ್ಲಿ ಮನೆಗಳು ಇದ್ದಿರುವುದು ಕಂಡು ಬಂದಿರುತ್ತದೆಂದು ಹಾಗೂ** ಅಂತಹ ಕುಟುಂಬದ ಮೊತ್ತಬ್ಬ ಸದಸ್ಯರ ಹೆಸರಿಗೆ ಮನೆ ಮಂಜೂರು ಮಾಡಲಾಗಿರುತ್ತದೆಂದು, ಅಂತವರು ಮೊದಲು ಇದ್ದ ಹಳೆ ಮನೆಗೆ ಹೊಂದಿಕೊಂಡು ಹೊಸ ಮನೆಯನ್ನು ನಿರ್ಮಿಸಿರುವುದು ತನಿಖಾ ಕಾಲಕ್ಕೆ ಕಂಡು ಬಂದಿರುವುದಾಗಿ ನುಡಿದಿರುತ್ತಾರೆ. ಆ ಸಂಬಂಧ

ಇರುವ ಮನೆಗಳ ಅಸಲು ಛಾಯಾಚಿತ್ರಗಳನ್ನು ನಿಪಿ–30 ರಿಂದ ನಿಪಿ–58 ರವರೆ.. ಗುರುತಿಸಿಕೊಂಡಿರುತ್ತಾರೆ.

19. ಪಿಡಬ್ಲ್ಯೂ–2 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, 2005–06ನೇಯ ಸಾಲಿನಲ್ಲಿ ಆಯ್ಕೆಯಾದ ಎಲ್ಲಾ 40 ಫಲಾನುಭವಿಗಳು ಮನೆಗಳನ್ನು ನಿರ್ಮಿಸಿದ್ದು, ಅವರುಗಳಿಗೆ ಮುದಕವಿ ಗ್ರಾಮ ಪಂಚಾಯಿತಿ ವತಿಯಿಂದ ಚೆಕ್ ಮುಖಾಂತರ ಹಣ ವಿತರಣೆ ಮಾಡಿದ್ದು, ತನಿಖೆಯಲ್ಲಿ ಕಂಡು ಬಂದಿರುವುದಾಗಿ, 2006–07ನೇಯ ಸಾಲಿನಲ್ಲಿ ಆಯ್ಕೆಯಾದ ಒಟ್ಟು 60 ಫಲಾನುಭವಿಗಳ ಪೈಕಿ 57 ಫಲಾನುಭವಿಗಳು ಮನೆ ನಿರ್ಮಿಸಿದ್ದು ಕಂಡು ಬಂದಿರುತ್ತದೆಂದು, ಮಿಕ್ಕುಳಿದ ಶ್ರೀಮತಿ ಲಕ್ಕಮ್ವ ಮಲ್ಲಪ್ಪ ಮಾದರ, ಶ್ರೀಮತಿ ಮಂಜುಳ ಬಸಪ್ಪ ಮಾದರ ಮತ್ತು ಶ್ರೀಮತಿ **ಸಕ್ರವ್ವ ಕಲ್ಲಪ್ಪ ತಳವಾರ ಎಂಬ ಮೂವರು ಮಹಿಳೆಯರು ತಿಮ್ಮಾಪುರ ಗ್ರಾಮದವರಾಗಿದ್ದು ಅವರುಗಳು ಮನೆಯನ್ನು ನಿರ್ಮಿಸದೆ ಮೇಲ್ಕಂಡ ಪಂಚಾಯಿತಿಯಿಂದ ಹಣ ಪಡೆದುಕೊಂಡಿರುವುದು ರಾಮದುರ್ಗ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಯವರ ಸ್ಥಳ ಪರಿಶೀಲನೆಯಿಂದ ಮತ್ತು ದಾಖಲೆಗಳಿಂದ ಕಂಡು ಬಂತೆಂದು ರಾಮದುರ್ಗ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಯುವರು ನಿಪಿ–4 ರಲ್ಲಿ ನಮೂದಿಸಿರುವುದಾಗಿ, ಸದರಿ ನಮೂದು ನಿಪಿ–4ರ 4ನೆಯ ಕಂಡಿಕೆಯಲ್ಲಿ ಇರುತ್ತದೆಂದು ಸಾಕ್ಷ್ಯ ನುಡಿದಿರುತ್ತಾರೆ.**

20. ಪಿಡಬ್ಲ್ಯೂ–2 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಆಶ್ರಯ ಯೋಜನೆಯಡಿಯಲ್ಲಿ ನಿರ್ಮಿಸಲಾದ ಮನೆಗಳನ್ನು ಪಂಚಾಯಿತಿಯ ಆಸ್ತಿ ರಿಜಿಸ್ಟರ್‌ನಲ್ಲಿ ನಮೂದು ಮಾಡಬೇಕಾಗಿತ್ತೆಂದು, ಅದರೆ ಆ ಸಮಯದಲ್ಲಿ ಮೇಲ್ಕಂಡ ಪಂಚಾಯತಿಯ ಕಾರ್ಯದರ್ಶಿಯಾಗಿದ್ದ ಈ ಆಸನೌ ರವರಿಗೆ **ಸಂಬಂಧಿಸಿದ ರಿಜಿಸ್ಟರ್‌ನಲ್ಲಿ ನಮೂದು ಮಾಡದಿರುವುದು ನಿಪಿ–4ರ 5ನೇಯ ಕಂಡಿಕೆಯಲ್ಲಿ ಕಂಡು ಬರುತ್ತದೆಂದು, ತನಿಖಾಧಿಕಾರಿ** ಮೇಲ್ಕಂಡ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ನಿಪಿ–5 ರಲ್ಲಿಯ ತನ್ನ ತನಿಖಾ ವರದಿಯನ್ನು ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

21. ಪಿಡಬ್ಲ್ಯೂ-2 ರವರು ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ರಾಮದುರ್ಗ ತಾಲ್ಲೂಕಿನ ಮುದಕವಿ ಗ್ರಾಮ ಪಂಚಾಯಿತಿ ವತಿಯಿಂದ ಆಶ್ರಯ ಯೋಜನೆಯಡಿ ಮನೆ ಇಲ್ಲದವರಿಗೆ ಮನೆಗಳನ್ನು ಮಂಜೂರು ಮಾಡದೇ, ಮನೆ ಇದ್ದವರಿಗೆ ಮಂಜೂರು ಮಾಡಿರುವುದು ತನಗೆ ಕಂಡು ಬಂದಿರುವುದಾಗಿ, ಮನೆ ನಿರ್ಮಿಸದಿರುವ ವ್ಯಕ್ತಿಗಳಿಗೂ ಸಹ ಚೆಕ್ ಮುಖಾಂತರ ಹಣ ಸಂದಾಯ ಮಾಡಿರುವುದು ತನಿಖೆಯಲ್ಲಿ ಕಂಡು ಬಂದಿತ್ತೆಂದು, ನಿರ್ಮಿಸಲಾದ ಮನೆಗಳ ಬಗ್ಗೆ ಪಂಚಾಯತಿಯು ಆಸ್ತಿ ರಿಜಿಸ್ಟರ್‌ನಲ್ಲಿ ನಮೂದು ಮಾಡದಿರುವುದು ತನಿಖೆಯಲ್ಲಿ ಕಂಡು ಬಂದಿರುವುದಾಗಿ ಹಾಗೂ 2005-06 ಮತ್ತು 2006-07ನೇಯ ಸಾಲಿನಲ್ಲಿ ಮುದಕವಿ ಗ್ರಾಮ ಪಂಚಾಯತಿಯ ಅಧ್ಯಕ್ಷರಾಗಿದ್ದ ಶ್ರೀ. ಜೆ.ಬಿ ಕಡ್ಡನ್ನವರ ಮತ್ತು ಆ ಸಾಲಿನಲ್ಲಿ ಆ ಪಂಚಾಯತಿಯ ಕಾರ್ಯದರ್ಶಿಯಾಗಿದ್ದ ಆಸನೌ ರವರು ಅಧಿಕಾರ ದುರುಪಯೋಗ ಪಡಿಸಿಕೊಂಡು, ಅರ್ಹರಾದ ಫಲಾನುಭವಿಗಳಿಗೆ ಮನೆಗಳನ್ನು ಮಂಜೂರು ಮಾಡದಿರುವುದು ಮತ್ತು ಮನೆ ನಿರ್ಮಿಸದಿರುವ ಶ್ರೀ. ಲಕ್ಕವ್ವ ಮಲ್ಲಪ್ಪ ಮಾದರ, ಶ್ರೀಮತಿ. ಮಂಜುಳ ಬಸಪ್ಪ ಮಾದರ ಮತ್ತು ಶ್ರೀಮತಿ ಸಕ್ರವ್ವ ಕಲ್ಲಪ್ಪ ತಳವಾರ ರವರಿಗೆ ಚೆಕ್ ಮುಖಾಂತರ ಹಣ ಬಿಡುಗಡೆ ಮಾಡಿರುವುದು ತನಿಖೆಯಲ್ಲಿ ಕಂಡು ಬಂದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದೇ ಪ್ರಕಾರ ನಿ.ಪಿ-5 ತನಿಖಾ ವರದಿಯಲ್ಲಿಯೂ ಸಹ ತಮ್ಮ ಅಭಿಪ್ರಾಯ ನೀಡಿರುತ್ತಾರೆ.

22. ಈ ತನಿಖಾಧಿಕಾರಿಯು ಮುಖ್ಯ ವಿಚಾರಣೆಯಲ್ಲಿ ನುಡಿದಿರುವ ಸಾಕ್ಷ್ಯವನ್ನು ಅಲ್ಲಗಳೆದಿರುವುದಿಲ್ಲ ಮತ್ತು ಪಾಟೀ ಸವಾಲು ವಿಚಾರಣೆ ಮಾಡಿರುವುದಿಲ್ಲ. ಈ ಆ.ಸ.ನೌ ರವರು ವಿಚಾರಣೆಯ ಮಧ್ಯೆದಲ್ಲಿ ಗೈರು ಹಾಜರಾಗಿದ್ದರಿಂದ **ಏಕತರ್ಫಿಯಾಗಿ** ನಿರ್ಣಯಿಸಲಾಗಿರುತ್ತದೆ ಮತ್ತು ಈ ಪ್ರಾಧಿಕಾರದ ಮುಂದೆ ಯಾವುದೇ ಪ್ರತಿರಕ್ಷಣಾ ( Defense evidence ) ಸಾಕ್ಷ್ಯ ನೀಡಿರುವುದಿಲ್ಲ.

23. **ಮೇಲ್ಕಂಡ ಅಂಶಗಳಿಂದ,** ಆಪಾದಿತ ಸರ್ಕಾರಿ ನೌಕರರವರು, ರಾಮದುರ್ಗ ತಾಲ್ಲೂಕಿನ ಮುದಕವಿ ಗ್ರಾಮ ಪಂಚಾಯಿತಿಯಲ್ಲಿ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಪಂಚಾಯತಿಯ ವತಿಯಿಂದ ಆಶ್ರಯ ಯೋಜನೆಯಡಿ ಮನೆ ಇಲ್ಲದವರಿಗೆ ಮನೆಗಳನ್ನು

ಮಂಜೂರು ಮಾಡದೇ, ಮನೆ ಇದ್ದವರಿಗೆ ಮಂಜೂರು ಮಾಡಿರುವುದು, ಮನೆ ನಿರ್ಮಿಸದಿರುವ ವ್ಯಕ್ತಿಗಳಿಗೂ ಸಹ ಚೆಕ್ ಮುಖಾಂತರ ಹಣ ಸಂದಾಯ ಮಾಡಿರುವುದು, ನಿರ್ಮಿಸಲಾದ ಮನೆಗಳ ಬಗ್ಗೆ ಪಂಚಾಯತಿಯ ಆಸ್ತಿ ರಿಜಿಸ್ಟರ್‌ನಲ್ಲಿ ನಮೂದು ಮಾಡದಿರುವುದು ಮತ್ತು 2005–06 ಮತ್ತು 2006–07ನೇಯ ಸಾಲಿನಲ್ಲಿ ಮುದಕವಿ ಗ್ರಾಮ ಪಂಚಾಯತಿಯ ಕಾರ್ಯದರ್ಶಿಯಾಗಿದ್ದ ಆಸನೌ ರವರು ಅಧಿಕಾರ ದುರುಪಯೋಗ ಪಡಿಸಿಕೊಂಡು ಅರ್ಹರಾದ ಫಲಾನುಭವಿಗಳಿಗೆ ಮನೆಗಳನ್ನು ಮಂಜೂರು ಮಾಡದಿರುವುದು ಮತ್ತು ಮನೆ ನಿರ್ಮಿಸದಿರುವ ಶ್ರೀ. ಲಕ್ಕವ್ವ ಮಲ್ಲಪ್ಪ ಮಾದರ, ಶ್ರೀಮತಿ. ಮಂಜುಳ ಬಸಪ್ಪ ಮಾದರ ಮತ್ತು ಶ್ರೀಮತಿ ಸಕ್ರವವ ಕಲ್ಲಪ್ಪ ತಳವಾರ ರವರಿಗೆ ಚೆಕ್ ಮುಖಾಂತರ ಹಣ ಬಿಡುಗಡೆ ಮಾಡಿ, ಕರ್ತವ್ಯಲೋಪ ಎಸಗಿರುವುದನ್ನು ಶಿಸ್ತು ಪ್ರಾಧಿಕಾರ ಪಿಡಬ್ಲ್ಯೂ-1 ಮತ್ತು 2 ರವರ ಮೌಖಿಕ ಸಾಕ್ಷ್ಯದಿಂದ ಮತ್ತು ನಿ.ಪಿ-1 ರಿಂದ 58 ರವರೆಗಿನ ದಾಖಲೆಗಳ ಮುಖಾಂತರ ರುಜುವಾತುಪಡಿಸಿರುತ್ತದೆ. ಈ ಆ.ಸ.ನೌ ರವರು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವಿಚಾರಣೆಯಿಂದ ರುಜುವಾತಾಗುತ್ತದೆ. ಕಾರಣ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ನಿಯಮ 3 (1) (ii) ಮತ್ತು (iii) ರಡಿಯಲ್ಲಿ ದುರ್ನಡತೆ ಎಸಗಿರುತ್ತಾರೆಂದು ತೀರ್ಮಾನಿಸಲಾಗಿದೆ.

24. ಈ ಎಲ್ಲಾ ಕಾರಣದಿಂದ ಆ.ಸ.ನೌರವರ ಮೇಲೆ ಹೊರಿಸಲಾದ ಆರೋಪವನ್ನು ಶಿಸ್ತು ಪ್ರಾಧಿಕಾರವು ಅವಶ್ಯಕ ಸಾಕ್ಷ್ಯಾಧಾರಗಳ ಮುಖಾಂತರ ರುಜುವಾತು ಪಡಿಸಿ, ದುರ್ನಡತೆ ಮತ್ತು ಕರ್ತವ್ಯಲೋಪಗಳನ್ನು ರುಜುವಾತು ಪಡಿಸುವಲ್ಲಿ ಯಶಸ್ವಿಯಾಗಿರುತ್ತಾರೆ ಎಂದು ನಿರ್ಣಯಿಸಲಾಗಿರುತ್ತದೆ. ಶಿಸ್ತು ಪ್ರಾಧಿಕಾರದವರು ನೀಡಿರುವ ಮೌಖಿಕ ಹಾಗೂ ದಸ್ತಾವೇಜು ಸಾಕ್ಷ್ಯಾಧಾರಗಳು, ಆ.ಸ.ನೌಕರರು ಕರ್ತವ್ಯಲೋಪ ಮತ್ತು ದುರ್ನಡತೆ ಎಸಗಿರುವ ಹೆಚ್ಚಿನ ಸಂಭವನೀಯತೆ (Probabilities) ಕಂಡು ಬಂದಿರುತ್ತದೆ. ಈ ಎಲ್ಲಾ ಕಾರಣಗಳಿಂದ **ಅಂಶ-1ಕ್ಕೆ ಸಕಾರಾತ್ಮಕವಾಗಿ ಉತ್ತರಿಸಲಾಯಿತು.**

**ಅಂಶ–2:** ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಆದೇಶ**

ಶಿಸ್ತು ಪ್ರಾಧಿಕಾರದವರು ಆಪಾದಿತ ಸರ್ಕಾರಿ ನೌಕರ ಶ್ರೀ **ಎ.ವೈ.ವಡ್ರಳ್ಳಿ,** ಕಾರ್ಯದರ್ಶಿ, ಮದಕವಿ ಗ್ರಾಮ ಪಂಚಾಯತಿ, ರಾಯಭಾಗ ತಾಲ್ಲೂಕು, ಬೆಳಗಾವಿ ಜಿಲ್ಲೆ ರವರ ವಿರುದ್ಧ ಹೊರಿಸಲಾದ ಆರೋಪವನ್ನು **ರುಜುವಾತು** ಪಡಿಸಲಾಗಿದೆ ಎಂದು ನಿರ್ಣಯಿಸಲಾಗಿದೆ.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ–1 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

**6ನೇ ಏಪ್ರಿಲ್ 2021.**

**(ಸೆಲ್ವ ಕುಮಾರ್.ಸಿ)**
ಅಪರ ನಿಬಂಧಕರು ವಿಚಾರಣೆಗಳು–16,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

**GOVERNMENT OF KARNATAKA**

**KARNATAKA LOKAYUKTA**

No.LOK/INQ/14-A/279/2014/ARE-16

Multi Storied Building,
Dr. B.R. Ambedkar Veedhi,
Bengaluru-560 001
Date: **07/04/2021**

**RECOMMENDATION**

Sub:- Departmental inquiry against;
Sri A.Y. Vadralli, Secretary, Mudakavi Grama Panchayath, Raibagh Taluk, Belagavi District – Reg.

Ref:- 1) Govt. Order No. ಗ್ರಾಅಪ/134/ಗ್ರಾಪಂಕಾ/2014, Bengaluru dated 24/4/2014.

2) Nomination order No.LOK/INQ/14-A/279/2014, Bengaluru dated 9/5/2014 of Upalokayukta-1, State of Karnataka, Bengaluru

3) Inquiry Report dated 6/4/2021 of Additional Registrar of Enquiries-16, Karnataka Lokayukta, Bengaluru

----

The Government by its order dated 24/4/2014 initiated the disciplinary proceedings against Sri A.Y.Vadralli, Secretary, Mudakavi Grama Panchayath, Raibagh Taluk, Belagavi District (hereinafter referred to as Delinquent Government Official, for short as DGO) and entrusted the Departmental Inquiry to this Institution.

2. This Institution by Nomination Order No.LOK/INQ/14-A/279/2014, Bengaluru dated 9/5/2014 nominated Additional Registrar of Enquiries-11, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGO for the alleged charge of misconduct, said to have been committed by him. Subsequently, by Order No. UPLOK-1&2/DE/Transfers/2019 dated 7/2/2019, Additional Registrar of Enquiries-16, Karnataka Lokayukta, Bengaluru was re-nominated as inquiry officer to conduct departmental inquiry against DGO.

3. The DGO Sri A.Y. Vadralli, Secretary, Mudakavi Grama Panchayath, Raibagh Taluk, Belagavi District was tried for the following charges:-

"That you DGO Sri A.Y. Vadralli, Secretary, Mudakavi Grama Panchayathi, Raya Bhaga Taluk, Belgaum District while discharging your duties:

(1) As shown in detail in I.O's report, you DGO, during 2005-06, 40 beneficiaries had been identified under Ashraya Scheme. But, out of them, only 2 beneficiaries were not having houses. Whereas, family members of other 38 beneficiaries had houses already, to whom houses had been allotted;

(2) You DGO, during 2006-07, 60 beneficiaries have been identified under Ashraya Scheme, but out of them, only 5 beneficiaries had no houses. Whereas, family members of other beneficiaries had houses already, to whom houses had been allotted;

(3) You DGO payment has been made to beneficiaries (a) Smt. Laxmavva Mallappa Maadar; (b) Smt. Majunla Basappa Maadar and (c) Smt. Sankravva Kallappa Talawar, though they had not constructed the houses;

(4) You DGO has not made any entry in the Panchayath property Register for the houses constructed under Ashraya Scheme.

and thereby, you DGO failed to maintain absolute integrity and devotion to duty and committed an act which is unbecoming of a Government Servant and thus you are guilty of misconduct under Rule 3(1)(i) to (iii) of the KCS (Conduct) Rules, 1966."

4. The Inquiry Officer (Additional Registrar of Enquiries-16) on proper appreciation of oral and documentary evidence has held that the Disciplinary Authority has proved the above charges against DGO Sri A.Y. Vadralli, Secretary, Mudakavi Grama Panchayath, Raibagh Taluk, Belagavi District.

5. On re-consideration of inquiry report and taking note of the totality of the circumstances of the case, I do not find any reason to interfere with the findings recorded by the Inquiry Officer. It is hereby recommended to the Government to accept the report of Inquiry Officer.

6. As per the First Oral Statement submitted by DGO, he has retired from service on 31/5/2020 (during the pendency of inquiry).

7. Having regard to the nature of charges proved against DGO Sri A.Y. Vadralli, Secretary, Mudakavi Grama Panchayath, Raibagh Taluk, Belagavi District, it is hereby recommended to the Government for imposing penalty of withholding 10% of pension payable to DGO Sri A.Y.Vadralli for a period of 5 years.

8. Action taken in the matter shall be intimated to this Authority.

Connected records are enclosed herewith.

7/4

**(JUSTICE B.S.PATIL)**
Upalokayukta,
State of Karnataka,
Bengaluru